ವಿದ್ಯಾರ್ಥಿಗಳ 'ಕುತೂಹಲ' ತಣಿಸುವ ಪ್ರಯೋಗಾಲಯ

ಕೇಂದ್ರ ಸರ್ಕಾರದ ಮಹತ್ವದ ಯೋಜನೆ 'ಅಟಲ್ ಟಿಂಕರಿಂಗ್ ಪ್ರಯೋಗಾಲಯ ಕೌಟಿಲ್ಯದಲ್ಲಿ ಉದ್ಘಾಟನೆ

ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ ಕೇಂದ್ರ ಸರ್ಕಾರದ ನೀತಿ ಆಯೋಗದ ಯೋಜನೆಯಡಿ ಆರಂಭಿಸಿರುವ 'ಅಟಲ್ ಟಿಂಕರಿಂಗ್ ಪ್ರಯೋಗಾಗಲಯ'ದಲ್ಲಿ ವಿದ್ಯಾರ್ಥಿಗಳೊಂದಿಗೆ ಜಿಲ್ಲಾಧಿಕಾರಿ ಡಿ.ರಂದೀಪ್, ಡಾ.ಬಿ.ಎನ್.ಸುರೇಶ್, ಸಿ.ಡಿ.ಪ್ರಸಾದ್, ಆರ್.ರಘು ಚಿತ್ರದಲ್ಲಿದ್ದಾರೆ.

- ● ಇತರ ಶಾಲೆಗಳ ಮಕ್ಕಳಿಗೂ ಪ್ರಯೋಗಾಲಯ ಬಳಕೆಗೆ ಅವಕಾಶ
- ● ಸಂಜೆ ೪ ರಿಂದ ೬.೩೦ ರವರೆಗೆ ಇತರೆ ಶಾಲೆ ವಿದ್ಯಾರ್ಥಿಗಳಿಗೆ ಸಮಯ ನಿಗದಿ
- ● ಶನಿವಾರ ಹಾಗೂ ಭಾನುವಾರವೂ ತೆರೆದಿರಲಿದೆ ಪ್ರಯೋಗಾಲಯ

ಮೈಸೂರು,ಸೆ.೧೨–ಎಟಿಎಂ ಕಳವಾಗುತ್ತದೆ ಎನ್ನುವ ಭಯ ಇನ್ನು ಮುಂದೆ ಬ್ಯಾಂಕ್‌ಗಳಿಗೆ ಬೇಡ. ಎಟಿಎಂನಲ್ಲಿರುವ ಹಣವನ್ನು ಬಾಕ್ಸ್ ಸಮೇತ ಯಾರಾದರೂ ಹೊತ್ತೊಯ್ಯಲು ಪ್ರಯತ್ನಿಸಿದರೆ ಸೈರನ್ ಗಂಟೆ ಬಾರಿಸುತ್ತದೆ.

ಇಂಥದ್ದೊಂದು ಅನ್ವೇಷಣೆ ಯನ್ನು ನಗರದ ಕೌಟಿಲ್ಯ ವಿದ್ಯಾಲ ಯದ ೯ನೇ ತರಗತಿಯ ವಿದ್ಯಾರ್ಥಿ ಗಳಾದ ದುಶ್ಯಂತ್ ಮತ್ತು ಕೌಶಿಕ್ ಮಾಡಿದ್ದಾರೆ.

೬ನೇ ತರಗತಿಯ ತೇಜಸ್ವಿನಿ ಸಾಧಾರಣ ಉಪಕರಣಗಳನ್ನು ಬಳಕೆ ಮಾಡಿಕೊಂಡು ವಿದ್ಯುತ್ ಉತ್ಪಾದನೆ ಮಾಡಿದ್ದರು. ಪ್ರಶಾಂತ್ ಯು. ಪಾಟೀಲ್ ಸೋಲಾರ್ ಶಕ್ತಿ ಬಳಕೆ ಮಾಡಿಕೊಂಡು ಫ್ಯಾನ್ ಓಡಿಸುತ್ತಿದ್ದ.

ಹೀಗೆ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ತಮಗಿರುವ ಆಸಕ್ತಿಯನ್ನು, ಕುತೂಹಲವನ್ನು ಮಂಗಳವಾರ ವಿದ್ಯಾರ್ಥಿಗಳು ಕೌಟಿಲ್ಯ ಶಾಲೆಯಲ್ಲಿ ಪ್ರದರ್ಶನ ಮಾಡಿದ್ದರು.

ಮಕ್ಕಳು ಅನ್ವೇಷಣೆ ಮಾಡಲು ಅವರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಆರಂಭಿಸಿರುವ ಮಹತ್ವದ ಯೋಜನೆಯಾದ 'ಅಟಲ್ ಟಿಂಕರಿಂಗ್ ಪ್ರಯೋಗಾಲಯ' ನಗರದ ಕೌಟಿಲ್ಯ ಶಾಲೆಯಲ್ಲಿ ಮಂಗಳವಾರ ಉದ್ಘಾಟನೆಗೊಂಡಿತು.

ಕೇಂದ್ರ ಸರ್ಕಾರದ ನೀತಿ ಆಯೋಗದ ಯೋಜನೆಯಡಿ 'ಅಟಲ್ ಟಿಂಕರಿಂಗ್ ಪ್ರಯೋಗಾಲಯ' ಆರಂಭವಾಗಿರುವುದು ಮೈಸೂರಿನ ಎಲ್ಲಾ ಶಾಲೆಯ ಮಕ್ಕಳಿಗೂ ಉಪಯುಕ್ತವಾಗಿದೆ. ಮಕ್ಕಳಲ್ಲಿರುವ ಪ್ರತಿಭೆಯ ಅನಾವರಣಕ್ಕೆ ಇದೊಂದು ಉತ್ತಮ ಅವಕಾಶ.

–ಡಿ.ರಂದೀಪ್, ಜಿಲ್ಲಾಧಿಕಾರಿ.

ಪ್ರಯೋಗಾಲಯದಲ್ಲಿ ವಿದ್ಯಾರ್ಥಿನಿಯರು ಅತಿಥಿಗಳಿಗೆ ವಿಜ್ಞಾನದ ಮಾದರಿಗಳ ಬಗ್ಗೆ ಮಾಹಿತಿ ನೀಡುತ್ತಿರುವುದು. ಪ್ರಾಂಶುಪಾಲರಾದ ಎಲ್.ಸವಿತಾ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರಿನಲ್ಲೇ ಪ್ರಥಮ : ಕೇಂದ್ರ ಸರ್ಕಾರದ ಈ ಯೋಜನೆಯನ್ನು ಪಡೆಯಲು ಸ್ಪರ್ಧೆಗಳಲ್ಲಿ ಭಾಗವಹಿಸಬೇಕಿತ್ತು. ಕೌಟಿಲ್ಯ ಶಾಲೆ ವಿದ್ಯಾರ್ಥಿಗಳು ಹೈದರಾಬಾದ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಅದರಲ್ಲಿ ಉತ್ತೀರ್ಣರಾಗಿ ಶಾಲೆಗೆ 'ಅಟಲ್ ಟಿಂಕರಿಂಗ್ ಪ್ರಯೋಗಾಲಯ'ದ ಯೋಜನೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ಜಿಲ್ಲೆಯಲ್ಲೇ ಕೌಟಿಲ್ಯ ವಿದ್ಯಾಲಯವು ಕೇಂದ್ರದ 'ಅಟಲ್ ಟಿಂಕರಿಂಗ್ ಪ್ರಯೋಗಾಲಯ' ಯೋಜನೆ ಪಡೆದ ಪ್ರಥಮ ಶಾಲೆ ಎನಿಸಿಕೊಂಡಿದೆ.

ಪ್ರಯೋಗಾಲಯದಲ್ಲಿ ಏನೇನಿದೆ?

ಎಲೆಕ್ಟ್ರಾನಿಕ್ ಸೆನ್ಸರ್, ಮೆಕಾನಿಕಲ್ ಟೂಲ್ಸ್ ಯೂನಿಟ್, ಸಾಲ್ಡರಿಂಗ್ ಯೂನಿಟ್, ೩ಡಿ ಪ್ರಿಂಟರ್, ಡ್ರೆಮೆಲ್ ಟೂಲ್ ಕಿಟ್, ಗ್ಲೂಗನ್ ಮುಂತಾದ ಉಪಕರಣಗಳು ಪ್ರಯೋಗಾಲಯದಲ್ಲಿವೆ. ವಿದ್ಯಾರ್ಥಿಗಳು ಇವುಗಳನ್ನು ಬಳಕೆ ಮಾಡಿಕೊಂಡು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಪ್ರಯೋಗಿಕವಾಗಿ ಸಂಶೋಧನೆಗಳನ್ನು ಕೈಗೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

ಎಲ್ಲ ಶಾಲಾ ಮಕ್ಕಳಿಗೂ ಅವಕಾಶ :

ಕಾರ್ಯಕ್ರಮದಲ್ಲಿ ಕೌಟಿಲ್ಯ ವಿದ್ಯಾಲಯದ ಪ್ರಾಂಶುಪಾಲೆ ಎಲ್.ಸವಿತಾ ಪ್ರಾಸ್ತವಿಕವಾಗಿ ಮಾತ ನಾಡಿ, ಸರ್ಕಾರಿ ಹಾಗೂ ಇತರ ಎಲ್ಲಾ ಶಾಲೆಗಳ ಮಕ್ಕಳು ಈ ಪ್ರಯೋಗಾಲಯಕ್ಕೆ ಭೇಟಿ ನೀಡಿ ಇದರ ಸದುಪಯೋಗ ಪಡೆದುಕೊಳ್ಳಬಹುದು. ಶಾಲೆಯ ಸಮಯ ಹೊರತುಪಡಿಸಿ ಸಂಜೆ ೬.೩೦ರವರೆಗೆ, ಶನಿವಾರ ಹಾಗೂ ಭಾನುವಾರವೂ ಪ್ರಯೋಗಾಲಯ ತೆರೆದಿರುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಪ್ರಯೋಗಾಲಯಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಿ.ರಂದೀಪ್, ಇವರೊಂದಿಗೆ ಕೌಟಿಲ್ಯ ಸಂಸ್ಥೆಯ ಸಂಸ್ಥಾಪಕ ಆರ್.ರಘು, ಇಸ್ರೋ ವಿಜ್ಞಾನಿ ಎಲ್.ಡಿ.ಪ್ರಸಾದ್, ಜೆಎಸ್‌ಎಸ್ ಸಂಸ್ಥೆಯ ಡಾ.ಶ್ಯಾಮ ಸುಂದರ್, ಪ್ರಾಂಶುಪಾಲರಾದ ಸವಿತಾ, ಆರ್‌ಬಿಐ ಡಿಜಿಎಂ ನಾರಾಯಣನ್, ಜೆಎಸ್‌ಎಸ್‌ನ ಶ್ರೀಹರಿ ಮುಂತಾದವರು ಉಪಸ್ಥಿತರಿದ್ದರು.

ವಿಜ್ಞಾನ, ತಂತ್ರಜ್ಞಾನದಿಂದ ದೇಶ ಅಭಿವೃದ್ಧಿ: ಡಾ. ಸುರೇಶ್

ಮೈಸೂರು, ಸೆ.೧೨–ವಿಜ್ಞಾನ ಮತ್ತು ತಂತ್ರಜ್ಞಾನದಿಂದ ದೇಶ ಅಭಿವೃದ್ಧಿ ಸಾಧ್ಯ ಎಂದು ವಿಕ್ರಂ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಪದ್ಮಶ್ರೀ, ಪದ್ಮಭೂಷಣ ಡಾ.ಬಿ.ಎನ್.ಸುರೇಶ್ ಅಭಿಪ್ರಾಯಪಟ್ಟರು.

ನಗರದ ಕೌಟಿಲ್ಯ ವಿದ್ಯಾಲಯದಲ್ಲಿ ಮಂಗಳವಾರ 'ಅಟಲ್ ಟಿಂಕರಿಂಗ್ ಪ್ರಯೋಗಾಲಯ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಶಕ್ತಿಯೇ ಭಾರತದ ಸಂಪನ್ಮೂಲ. ವಿಶ್ವದ ಬೇರೆಲ್ಲಾ ದೇಶಗಳಿಗಿಂತಲೂ ಭಾರತದಲ್ಲಿ ಯುವ ಶಕ್ತಿ ಅತ್ಯಂತ ಬಲಶಾಲಿಯಾಗಿದೆ. ಈ ಶಕ್ತಿ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾಧನೆ ಮಾಡಬೇಕು ಎಂದರು. ದೇಶದ ಯುವ ಶಕ್ತಿಯನ್ನು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಲು ಕೇಂದ್ರದ ನೀತಿ ಆಯೋಗ ಶಾಲೆಯ ಮಕ್ಕಳಿಗೆ ಅಟಲ್ ಟಿಂಕರಿಂಗ್ ಪ್ರಯೋಗಾಲಯ ಜಾರಿಗೊಳಿಸಿದೆ. ನೀವೆಲ್ಲರೂ ಇದರ ಪ್ರಯೋಜನ ಪಡೆದುಕೊಳ್ಳಿ ಎಂದು ತಿಳಿಸಿದರು.

ವೀಕ್ಷಣೆ, ಕುತೂಹಲ, ಅನ್ವೇಷಣೆ

ವಿದ್ಯಾರ್ಥಿಗಳಲ್ಲಿ ಯಾವಾಗಲೂ ಯಾವುದೇ ವಿಷಯವಾದರೂ ಸರಿ ವೀಕ್ಷಣೆ, ಕುತೂಹಲ ಹಾಗೂ ಅನ್ವೇಷಣೆಯ ಮನೋಭಾವ ಇದ್ದಾಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದ ಅವರು, ವಿದ್ಯಾರ್ಥಿಗಳಲ್ಲಿ ಮಹತ್ವಾಕಾಂಕ್ಷೆಯೂ ಇರಬೇಕು. ಇದರೊಂದಿಗೆ ಶ್ರದ್ಧೆ, ಶಿಸ್ತು ಇದ್ದರೆ ಗುರಿ ಸಾಧಿಸಬಹುದು ಎಂದು ಹೇಳಿದರು.

೧೫ರಂದು ಐಡಿಯಾಪ್ರೆನರ್ ಕಾರ್ಯಕ್ರಮ

ಮೈಸೂರು,ಸೆ.೧೨– ಇಂಜಿನಿಯರಿಂಗ್ ವಿದ್ಯಾರ್ಥಿಗಳ ಹೊಸ ಆಲೋಚನೆಗಳ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಸಲುವಾಗಿ ನಗರದ ರಾಮನ್ ಇಂಟರ್ ನ್ಯಾಷನಲ್ ಇನ್‌ಫರ್ಮೇಷನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಐಐಟಿ) ವತಿಯಿಂದ ಸೆ.೧೫ರಂದು ಬೆಳಿಗ್ಗೆ ೯ ರಿಂದ ಸಂಜೆ ೫ ಗಂಟೆಯವರೆಗೆ ರಾಜ್ಯ ಮಟ್ಟದ ಕಾರ್ಯಕ್ರಮ 'ಐಡಿಇಎಪಿಆರ್ ಇಎನ್‌ಇಯುಆರ್' ಹಮ್ಮಿಕೊಳ್ಳಲಾಗಿದೆ ಎಂದು ಆರ್‌ಐಐಐಟಿ ಮುಖ್ಯಸ್ಥ ವೆಂಕಟೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ತಕ್ಕ ಅವಕಾಶಗಳ ಬಗೆಗಿನ ಮಾಹಿತಿ ಕೊಡಲಾಗುತ್ತದೆ. ೪೯೦ ರೂ.ಗಳನ್ನು ನೋಂದಣಿ ಶುಲ್ಕವಾಗಿ ನಿಗದಿಪಡಿಸಿದ್ದು, ಊಟ, ತಿಂಡಿ ವ್ಯವಸ್ಥೆ ಮಾಡಲಾಗುತ್ತದೆ. ಕಂಪನಿಗಳ ಸಿಇಒ, ಹೂಡಿಕೆದಾರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಉತ್ತಮವಾಗಿ ವಿಷಯ, ಯೋಜನೆಯನ್ನು ಪ್ರಸ್ತುತಪಡಿಸಿದವರಿಗೆ ೨೦ ಸಾವಿರ ರೂ. ಬಹುಮಾನ ನೀಡಲಾಗುವುದು ಎಂದು ತಿಳಿಸಿದರು.

ಇಂಜಿನಿಯರಿಂಗ್ ವಿದ್ಯಾರ್ಥಿಗಳಾದ ನಿಖಿತಾ, ಸಂಧ್ಯಾ, ವಂಶಿ, ವರುಣ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

೧೫, ೧೬ರಂದು ಪಾಲಿಕಾನ್ ಸಮ್ಮೇಳನ

ಮೈಸೂರು,ಸೆ.೧೨– ನಗರದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪಾಲಿಮರ್ ಸೈನ್ಸ್ ಅಂಡ್ ಟೆಕ್ನಾಲಜಿ ವಿಭಾಗದ ವತಿಯಿಂದ ಐಆರ್‌ಐ ಕರ್ನಾಟಕದ ಸಹಯೋಗದಲ್ಲಿ ಸೆ.೧೫ ಮತ್ತು ೧೬ರಂದು 'ನಾವೆಲ್ ಪಾಲಿಮರಿಕ್ ಮೆಟೀರಿಯಲ್ಸ್' ಎಂಬ ವಿಷಯದಲ್ಲಿ ೭ನೇ ರಾಷ್ಟ್ರೀಯ ಸಮ್ಮೇಳನ 'ಪಾಲಿಕಾನ್ ೨೦೧೭' ಆಯೋಜಿಸಲಾಗಿದೆ ಎಂದು ಪಾಲಿಕಾನ್ ಸಮ್ಮೇಳನದ ಅಧ್ಯಕ್ಷ ಡಾ.ಜಿ.ಎಂ.ಶಶಿಧರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಮರ್ ಆಧಾರಿತ ಕೈಗಾರಿಕೋದ್ಯಮದ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುವ ಮಟ್ಟಿಗೆ ಈ ಸಮ್ಮೇಳನದಲ್ಲಿ ಚರ್ಚಿಸಲಾಗುತ್ತದೆ. ೧೧೫ ಪ್ರಬಂಧಗಳು, ೩೬ ಆಹ್ವಾನಿತ ಉಪನ್ಯಾಸಗಳು, ೭ ಪ್ಲೀನರಿ ಚರ್ಚೆಗಳು ನಡೆಯಲಿವೆ ಎಂದರು.

ಸಮ್ಮೇಳನಕ್ಕೆ ಸೆ.೧೫ರಂದು ಬೆಳಿಗ್ಗೆ ೧೦ ಗಂಟೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಕರಿಸಿದ್ದಪ್ಪ ಚಾಲನೆ ನೀಡಲಿದ್ದಾರೆ. ವಿವಿಧ ಕ್ಷೇತ್ರಗಳ ಗಣ್ಯರು ಅತಿಥಿಗಳಾಗಿ ಭಾಗವಹಿಸುವರು. ಸೆ.೧೬ರಂದು ಸಂಜೆ ೪.೧೫ಕ್ಕೆ ನಡೆಯುವ ಸಮಾರೋಪ ಸಮಾರಂಭ ನಡೆಯಲಿದೆ.

ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಸ್. ನಾಗಭೂಷಣ್, ಪಾಲಿಕಾನ್ ೨೦೧೭ರ ಸಂಘಟನಾ ಕಾರ್ಯದರ್ಶಿ ಡಾ.ಸಿದ್ದರಾಮಯ್ಯ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜಾ.ದಳ ಅಲ್ಪಸಂಖ್ಯಾತರ ಘಟಕ ಅಧ್ಯಕ್ಷ ಸೈಯದ್ ರಾಜೀನಾಮೆ

ಮೈಸೂರು,ಸೆ.೧೨– ಜಾ.ದಳದಲ್ಲಿ ಅಲ್ಪಸಂಖ್ಯಾತ ನಾಯಕ ಜಮೀರ್ ಅಹ್ಮದ್ ಖಾನ್ ಅವರನ್ನು ಕಡೆಗಣಿಸಿರುವುದನ್ನು ಖಂಡಿಸಿ ನಗರ ಯುವ ಜಾ.ದಳ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಸೈಯದ್ ಹಮೀದ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾ.ದಳದಲ್ಲಿ ಅಲ್ಪಸಂಖ್ಯಾತ ನಾಯಕರಿಗೆ ಯಾವುದೇ ಗೌರವ ಇಲ್ಲವಾಗಿದೆ. ನಮ್ಮ ನಾಯಕರಾದ ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ಪಕ್ಷದಲ್ಲಿ ಸಾಕಷ್ಟು ತೊಂದರೆ ಕೊಡಲಾಗಿದೆ. ಅಲ್ಪಸಂಖ್ಯಾತ ನಾಯಕರಿಗೆ ಪಕ್ಷದಲ್ಲಿ ಬೆಲೆ ಇಲ್ಲದಿರುವುದರಿಂದ ನಗರ ಯುವ ಜಾ.ದಳ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದರು.

ನನ್ನ ಜತೆ ಇನ್ನೂ ಹಲವಾರು ಕಾರ್ಯಕರ್ತರು ರಾಜೀನಾಮೆ ನೀಡಲಿದ್ದಾರೆ. ಮುಂದಿನ ದಿನಗಳಲ್ಲಿ ಜಮೀರ್ ಅವರು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಬದ್ಧ ಎಂದು ತಿಳಿಸಿದರು.

ಅಲ್ಪಸಂಖ್ಯಾತರ ಘಟಕದ ಅಜರ್, ಫೈರೋಜ್, ಸಮೀರ್, ಖಾಸಿಮ್, ಮುಬಾರಕ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹರಿಯಾಣದಲ್ಲಿ ಮತ್ತೊಬ್ಬ ಶಾಲಾ ಬಾಲಕನ ಹತ್ಯೆ

ಕೇಂದ್ರ ಸರ್ಕಾರಕ್ಕೆ ಸರ್ವೋಚ್ಚ ನ್ಯಾಯಾಲಯದ ನೋಟಿಸ್

ಫರೀದಾಬಾದ್(ಹರಿಯಾಣ),ಸೆ.೧೨– ಹರಿಯಾಣದ ಗುರುಗ್ರಾಮದಲ್ಲಿನ ರಯಾನ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ೨ನೇ ತರಗತಿ ವಿದ್ಯಾರ್ಥಿ ಪ್ರದ್ಯುಮ್ನನ ಮೇಲೆ ಶಾಲಾ ವಾಹನದ ಕಂಡಕ್ಟರ್ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿ ಬರ್ಬರವಾಗಿ ಕೊಲೆ ಮಾಡಿದ ಪ್ರಕರಣದ ಬೆನ್ನಲ್ಲೇ ರಾಜ್ಯದಲ್ಲಿ ಮತ್ತೊಂದು ಅಂತಹುದೇ ಭೀಕರ ಕೃತ್ಯ ನಡೆದಿದ್ದು, ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

- ■ ೭ನೇ ತರಗತಿ ವಿದ್ಯಾರ್ಥಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಕೊಂದ ಯುವಕನ ಸೆರೆ
- ■ ಶಾಲೆಗಳಲ್ಲಿ ಸುರಕ್ಷತೆ ಕೋರಿ ಸರ್ವೋಚ್ಚ ನ್ಯಾಯಾಲಯಕ್ಕೆ ಮಹಿಳಾ ವಕೀಲರಿಬ್ಬರಿಂದ ಅರ್ಜಿ
- ■ ಸಚಿವರಾದ ಮೇನಕಾ ಗಾಂಧಿ, ಜಾವ್ಡೇಕರ್ ನೇತೃತ್ವದಲ್ಲಿ ಇಂದು ಉನ್ನತ ಮಟ್ಟದ ಸಭೆ; ಮಾರ್ಗಸೂಚಿ ಕುರಿತು ಚರ್ಚೆ

ಆ.೨೪ರಂದು ನಾಪತ್ತೆಯಾಗಿದ್ದ ೧೨ ವರ್ಷದ ಶಾಲಾ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಿದ ಆರೋಪದ ಮೇಲೆ ೧೮ ವರ್ಷದ ತರುಣನನ್ನು ಬಂಧಿಸಲಾಗಿದೆ. ೭ನೇ ತರಗತಿಯ ಬಾಲಕನ ಶವ ಕೊಳೆತ ಸ್ಥಿತಿಯಲ್ಲಿ ಆತನ ಗ್ರಾಮದ ಸರ್ಕಾರಿ ಶಾಲೆ ಬಳಿ ಪತ್ತೆಯಾಗಿತ್ತು. ಈ ಕೃತ್ಯದ ಬಗ್ಗೆ ತನಿಖೆ ನಡೆಸಿದ ಪೊಲೀಸರು ಅದೇ ಗ್ರಾಮದ ಸೂರಜ್ ಎಂಬಾತನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ, ಬಾಲಕನನ್ನು ಕೊಲ್ಲುವುದಕ್ಕೆ ಮುನ್ನ ಲೈಂಗಿಕ ದೌರ್ಜನ್ಯ ನಡೆಸಿರುವುದಾಗಿ ಆರೋಪಿ ತಪ್ಪು ಒಪ್ಪಿಕೊಂಡಿದ್ದಾನೆ.

ಹೊಸದಿಲ್ಲಿ ವರದಿ: ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗಾಗಿ ಸರಿಯಾದ ಮಾರ್ಗಸೂಚಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡುವಂತೆ ಮಹಿಳಾ ವಕೀಲರಿಬ್ಬರು ಸಲ್ಲಿಸಿದ ಅರ್ಜಿ ವಿಚಾರಣೆಯನ್ನು ಸರ್ವೋಚ್ಚ ನ್ಯಾಯಾಲಯ ಸೆ.೧೫ರಂದು ನಡೆಸಲು ಸಮ್ಮತಿಸಿದೆ.

ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಮತ್ತು ನ್ಯಾಯಮೂರ್ತಿಗಳಾದ ಅಮಿತವ್ ರಾವ್ ಮತ್ತು ಎ.ಎಂ.ಖಾನ್ವಿಲ್ಕರ್ ಅವರನ್ನೊಳಗೊಂಡ ಪೀಠ ಅರ್ಜಿಯ ವಿಚಾರಣೆಗೆ ಒಪ್ಪಿಗೆ ಸೂಚಿಸಿದೆ. ರಯಾನ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಕೊಲೆಯಾದ ಬಾಲಕ ಪ್ರದ್ಯುಮ್ನನ ತಂದೆ ಸಹ ಅರ್ಜಿ ಸಲ್ಲಿಸಿದ್ದು, ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೀಠ ತಿಳಿಸಿದೆ.

ಇಂದು ಉನ್ನತ ಮಟ್ಟದ ಸಭೆ: ದೇಶದ ವಿವಿಧೆಡೆ ಶಾಲೆಗಳಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರ್ಕಾರ, ಬುಧವಾರ ದಿಲ್ಲಿಯಲ್ಲಿ ಉನ್ನತಮಟ್ಟದ ಸಭೆ ಕರೆದಿದ್ದು, ಶಾಲಾ ಮಕ್ಕಳ ಸುರಕ್ಷತೆಗೆ ಪ್ರಮುಖ ಮಾರ್ಗಸೂಚಿಗಳ ಅನುಷ್ಠಾನ ಕುರಿತು ಚರ್ಚಿಸಿ ನಿರ್ಧಾರ ಕೈಗೊಳ್ಳಲಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮೇನಕಾ ಗಾಂಧಿ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವ್ಡೇಕರ್ ಸಭೆ ಕರೆದಿದ್ದು, ಎನ್‌ಸಿಪಿಸಿಆರ್, ಸಿಬಿಎಸ್‌ಇ, ಎನ್‌ಸಿಇಆರ್‌ಟಿ, ಕೇಂದ್ರೀಯ ವಿದ್ಯಾಲಯ ಸಂಘಟನೆ ಉನ್ನತಾಧಿಕಾರಿಗಳು ಭಾಗವಹಿಸಲಿದ್ದಾರೆ.

ಚೆಲುವಾಂಬ ಆಸ್ಪತ್ರೆ ಆವರಣ ಕೆಸರುಮಯ

ಗರ್ಭಿಣಿಯರು, ಬಾಣಂತಿಯರು, ನವಜಾತ ಶಿಶುಗಳಿಗೆ ಸೋಂಕು ತಗುಲುವ ಆತಂಕ



ಮೈಸೂರು,ಸೆ.೧೨– ಹೆರಿಗೆ ಆಸ್ಪತ್ರೆಯ ಆವರಣವೆಂದು ನಂಬುವುದಕ್ಕೆ ಸಾಧ್ಯವಿಲ್ಲದಂತಹ ಅಶುಚಿತ್ವ, ಮಳೆ ನೀರಿಗೆ ಮಣ್ಣೆಲ್ಲ ಗೊರೆಗೊರೆ, ಮರದಿಂದ ಉದುರಿದ ಹೂಗಳ ರಾಶಿ ಒಂದು ಕ್ಷಣ ಚೆಂದವಾಗಿ ಕಂಡರೂ, ಅದರಡಿಯ ಕೆಸರು ಕಂಡು ಮುಖ ಮುದುಡುತ್ತದೆ. ಇಂತಹ ಕಡೆ ನವಜಾತ ಶಿಶುಗಳು ಆರೋಗ್ಯವಾಗಿರುತ್ತವೆ ಎಂದು ಭಾವಿಸಬಹುದೇ?

ಇದು ನಗರದ ಚೆಲುವಾಂಬ ಆಸ್ಪತ್ರೆ ಆವರಣದ ಕಥೆ. ಹೆರಿಗೆ ವಾರ್ಡ್‌ಗಳನ್ನು ವಿಸ್ತರಿಸಿ, ಆಧುನೀಕರಣಗೊಳಿಸಿ ಇತ್ತೀಚೆಗೆ ಉದ್ಘಾಟಿಸಲಾಗಿದೆ. ಆದರೆ, ಆಸ್ಪತ್ರೆಯ ಮುಂಭಾಗದಲ್ಲಿರುವ ಉದ್ಯಾನದಲ್ಲಿ ಮಳೆನೀರು ನಿಂತಿದ್ದು, ಮಣ್ಣೆಲ್ಲ ಪಾಚಿಗಟ್ಟಿದೆ. ಇದಕ್ಕೆ ಯಾರು ಹೊಣೆ? ಬಹುಶಃ ಆಸ್ಪತ್ರೆಯವರನ್ನು ಕೇಳಿದರೆ ಮಳೆ ಎಂದು ಸಲೀಸಾಗಿ ಉತ್ತರ ಹೇಳಬಹುದು. ಆದರೆ, ಅದರಿಂದ ಉಂಟಾಗುವ ತೊಂದರೆಯನ್ನಾದರೂ ನಿಯಂತ್ರಿಸುವ ಶಕ್ತಿ ಸಂಬಂಧಪಟ್ಟವರಿಗಿರುತ್ತದೆ. ಅದಕ್ಕೆ ಇಚ್ಛಾಶಕ್ತಿ ಬೇಕಷ್ಟೆ.

ಆಸ್ಪತ್ರೆಯ ಆವರಣದಲ್ಲಿ ಬಹಳಷ್ಟು ಕಡೆ ಇಂತಹ ಅಶುಚಿತ್ವ ಇದ್ದರೂ ಆಸ್ಪತ್ರೆಯ ಸಿಬ್ಬಂದಿ ಅತ್ತ ಗಮನ ಹರಿಸದಿರುವುದು ಆಶ್ಚರ್ಯ!

ಗರ್ಭಿಣಿಯರೊಂದಿಗೆ ಬರುವ ಅವರ ಕುಟುಂಬದ ಸದಸ್ಯರು ಅಥವಾ ಹೆರಿಗೆಯ ನಂತರ ಮಗು, ಬಾಣಂತಿಯನ್ನು ನೋಡಿಕೊಳ್ಳುವುದಕ್ಕೆ ಜೊತೆಗಿರುವವರು ಇಲ್ಲಿ ಒಮ್ಮೊಮ್ಮೆ ವಿರಮಿಸುತ್ತಾರೆ. ಆಸ್ಪತ್ರೆಗೆ ತಮ್ಮವರನ್ನು ನೋಡಲು ಬರುವ ಬಹುತೇಕ ಜನರೂ ಆಸ್ಪತ್ರೆ ಪ್ರವೇಶ ದ್ವಾರ ತೆರೆಯುವರೆಗೂ ಆ ಉದ್ಯಾನದಲ್ಲೇ ಕಾಯುತ್ತಾ ಕುಳಿತಿರುತ್ತಾರೆ. ಹಾಗಾಗಿ ಆಸ್ಪತ್ರೆಯ ಸಿಬ್ಬಂದಿಗೆ ಇದನ್ನು ಶುಚಿಗೊಳಿಸುವುದು ಕರ್ತವ್ಯವೇ ಹೌದು.

ಈಗಲಾದರೂ ಚೆಲುವಾಂಬ ಆಸ್ಪತ್ರೆಯ ಸಿಬ್ಬಂದಿ ಅಥವಾ ಆಡಳಿತ ಮಂಡಳಿ ಇತ್ತ ಗಮನಹರಿಸಿ, ಸ್ವಚ್ಛತೆಗೆ ಮುಂದಾಗಲಿ ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

> ನನ್ನ ಮಗಳನ್ನು ಹೆರಿಗೆಗಾಗಿ ಕರೆ ತಂದಿದ್ದೇನೆ. ಈ ಕೊಳಕಿನಿಂದ ನಮ್ಮಂತಹ ಸಾಮಾನ್ಯರಿಗೆ ತಾನೇ ಕಾಯಿಲೆ ಬರುವುದು. ಗರ್ಭಿಣಿಯರು, ಬಾಣಂತಿಯರು, ಹಸುಳೆಗಳಿಗೆ ಈ ಕೆಸರಿನಿಂದ ಸೋಂಕು ಉಂಟಾದರೂ ಆಶ್ಚರ್ಯವಿಲ್ಲ. ಆದರೆ, ಆಸ್ಪತ್ರೆಯ ವೈದ್ಯರಿಗಾಗಲಿ, ಸಿಬ್ಬಂದಿಗಾಗಲಿ ಆ ಭಯ ಇಲ್ಲ.
>
> **–ಹೆಸರು ಹೇಳಲಿಚ್ಛಿಸದ ನಾಗರಿಕ**

ರಾಜೇಂದ್ರ ಶ್ರೀ ಜಯಂತಿ

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ವಸತಿನಿಲಯಗಳ ಸಮುಚ್ಛಯದಲ್ಲಿ ನಡೆದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಎಚ್.ಡಿ.ಕೋಟೆಯ ಬಿಡುಗಲು ಮಠದ ಶ್ರೀ ಮಹದೇವ ಸ್ವಾಮೀಜಿ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಮುಖ್ಯ ನಿಲಯಪಾಲಕರಾದ ಮಮತಾ ಸುರೇಶ್ ಮತ್ತಿತರರು ಭಾಗವಹಿಸಿದ್ದರು.

ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪ್ರಥಮ

ಶಿಕ್ಷಣ ಇಲಾಖೆ ಆಯೋಜಿಸಿದ್ದ ಮೈಸೂರು ಉತ್ತರ ವಲಯ ಕ್ರೀಡಾಕೂಟದಲ್ಲಿ ಮೈಸೂರಿನ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದಬಾಲಕಿಯರ ತಂಡ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ಪಡೆದಿದೆ. ವಿಜೇತ ವಿದ್ಯಾರ್ಥಿಗಳೊಂದಿಗೆ ಉಪ ಪ್ರಾಚಾರ್ಯರಾದ ಎಂ.ಎಸ್.ಉಮಾ, ಸಂಪರ್ಕಾಧಿಕಾರಿ ಪ್ರೊ.ಎಚ್.ಕೆ.ಶಿವರಾಂ, ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್, ಅಧ್ಯಕ್ಷ ಗುಂಡಪ್ಪಗೌಡ, ಖಜಾಂಚಿ ಎಸ್.ಎನ್.ಲಕ್ಷ್ಮೀನಾರಾಯಣ, ದೈಹಿಕ ಶಿಕ್ಷಣ ಶಿಕ್ಷಕ ಮುನಿರಾಜು ಚಿತ್ರದಲ್ಲಿದ್ದಾರೆ.

ನೋಟರಿಗಳಿಗೆ ಕಾರ್ಯಾಗಾರ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನೋಟರಿಗಳ ಸಂಘ ಹಾಗೂ ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆ ಜಿಲ್ಲೆ ೩೧೭-ಎ, ಜಿಲ್ಲಾ ಕಾನೂನು ಘಟಕಗಳ ಸಂಯುಕ್ತಾಶ್ರಯದಲ್ಲಿ ನೋಟರಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಪಿ.ಜಿ.ಎಂ.ಪಾಟೀಲ್ ಉದ್ಘಾಟಿಸಿದರು. ಕಾರ್ಯಾಗಾರದ ಅಧ್ಯಕ್ಷ ಪಿ.ರಮೇಶ್, ಸಂಘದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಲಯನ್ಸ್ ಸಂಸ್ಥೆ ಜಿಲ್ಲೆ ೩೧೭-ಎ ೨೦೧೭-೧೮ರ ರಾಜ್ಯಪಾಲ ಲ.ನಾಗರಾಜ್ ವಿ.ಬೈರಿ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.